ಪ್ರತಿಯೊಂದು ಮಗುವೂ ಕಲಿಯಲು ಒತ್ತಾಸೆಯಾಗುವಂತೆ ಪ್ರಕ್ರಿಯೆಗಳ ಆವಿಷ್ಕಾರ

ಅನಿಲ್ ಸಿಂಗ್

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005)ರ ಮಾರ್ಗದರ್ಶಿ ತತ್ವಗಳು ಕೆಲವು ವಿಷಯಗಳನ್ನು ಬಹಳ ಸ್ಪಷ್ಟವಾಗಿ ಹೇಳಿದೆ. ಜ್ಞಾನವು ಶಾಲೆಯ ಹೊರಗಿನ ಬದುಕನ್ನು ಬೆಸೆಯಬೇಕು, ಉರುಹೊಡೆಯುವ ವಿಧಾನಗಳಿಂದಾಚೆಗೆ ಕಲಿಕೆಯುಂಟಾಗಬೇಕು ಮತ್ತು ಬೋಧನಾ-ಕಲಿಕೆ ಪ್ರಕ್ರಿಯೆಯು ಯಾಂತ್ರಿಕವಾಗಬಾರದು ಎನ್ನುವುದಕ್ಕೆ ಒತ್ತು ನೀಡಿದೆ. ಕಲಿಕೆಯು ಪಠ್ಯಪುಸ್ತಕಗಳಾಚೆಗೂ ವಿಸ್ತರಿಸಿ ಮಕ್ಕಳಲ್ಲಿ ಸಮಗ್ರ ಅರಿವು ಮೂಡುವಂತೆ ಪಠ್ಯಕ್ರಮವನ್ನು ಶ್ರೀಮಂತ-ಗೊಳಿಸಬೇಕಿದೆ. ಪರೀಕ್ಷಾ ವ್ಯವಸ್ಥೆ ನಮ್ಯವಾಗಿರಬೇಕಿದ್ದು, ನಿಯಮಿತ ತರಗತಿಯ ಚಟುವಟಿಕೆಗಳೊಳಗೇ ಸಂಯೋಜಿತ-ವಾಗಿರಬೇಕು. ಶಾಲೆಯ ವಾತಾವರಣ ಮತ್ತು ಬೋಧನಾ-ಕಲಿಕಾ ಪ್ರಕ್ರಿಯೆಯು ಪ್ರಜಾಪ್ರಭುತ್ವ ತತ್ವಾಧಾರಿತ-ವಾಗಿರಬೇಕು.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಿಂದ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಹಿಂದೆಂದಿಗಿಂತಲೂ ಅತೀ ಹೆಚ್ಚಿನ ವೇಗ ಪಡೆದಿದೆ. ವೈವಿಧ್ಯಮಯ ಕೌಶಲ ಮತ್ತು ಸಾಮರ್ಥ್ಯಗಳನ್ನು ಹೊಂದಿರುವ, ವಿವಿಧ ಸಮಾಜೋ – ಆರ್ಥಿಕ ಹಿನ್ನೆಲೆಗಳಿಂದ ಬಂದಂತಹ ಮಕ್ಕಳು ಹಾಗು ಯಾರಿಗೆ ಪ್ರಾಥಮಿಕ ಶಿಕ್ಷಣ ದೊರಕುತ್ತಿರಲಿಲ್ಲವೋ ಅವರೆಲ್ಲರೂ ಇಂದು ಶಾಲೆಗೆ ಬರುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣವು ಈಗ ಮಕ್ಕಳ ಮೂಲಭೂತ ಹಕ್ಕು. ಈಗಿನ ಬದಲಾದ ಪರಿಸ್ಥಿತಿಗಳಲ್ಲಿ ಒಳಗೊಳ್ಳುವ ರೀತಿಗಳ ಮೂಲಕ ಎಲ್ಲಾ ಮಕ್ಕಳಿಗೆ ಶಾಲೆಗಳಲ್ಲಿ ಒಂದು ಗೌರವಯುತ ಸ್ಥಾನ ನೀಡುವುದು ಅತ್ಯಗತ್ಯ. ಯಾವುದನ್ನೇ ಆದರೂ ಮತ್ತು ಎಲ್ಲವನ್ನೂ ಕಲಿಯುವ ಸಾಮರ್ಥ್ಯ ತಮಗೆ ಇದೆ ಎಂಬ ನಂಬಿಕೆಯನ್ನು ಮಕ್ಕಳಲ್ಲಿ ಹುಟ್ಟಿಸುವುದು ಬಹಳ ಮುಖ್ಯ. ನಮ್ಮ ಸಂವಿಧಾನದಲ್ಲಿ ಅಡಕಗೊಂಡ ಮೌಲ್ಯಗಳೆಡೆಗಿನ ನಮ್ಮ ಬದ್ಧತೆಗಳಿಗೂ ಕೂಡ ಇದು ಒಂದು ಮೂಲ ಅಗತ್ಯವಾಗಿದೆ.

ಆನಂದ್ ನಿಕೇತನ್ ಡೆಮಾಕ್ರೆಟಿಕ್ ಶಾಲೆಯು ಒಳಗೊಳ್ಳುವಿಕೆ ಹಾಗು ಪ್ರಜಾಪ್ರಭುತ್ವ ತತ್ವಗಳ ಆಶಯಗಳೊಂದಿಗೆ ಕಾರ್ಯ-ನಿರ್ವಹಿಸುತ್ತಿದೆ. ಕಳೆದ ಎಂಟು ವರ್ಷಗಳ ಪಯಣದಲ್ಲಿ, ಈ ಶಾಲೆಗೆ ಮಕ್ಕಳು ಕೇವಲ ವಿವಿಧ ಸಮಾಜೋ – ಆರ್ಥಿಕ ಹಿನ್ನೆಲೆಗಳಿಂದಷ್ಟೇ ಅಲ್ಲದೆ, ವಿವಿಧ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಹೊತ್ತು ಬಂದಿದ್ದಾರೆ. ಮಗು ಕೇಂದ್ರಿತ, ಪ್ರಜಾಪ್ರಭುತ್ವವಾದಿ ಮತ್ತು ಒಳಗೊಳ್ಳುವ ಪರಿಸರದಲ್ಲಿ ಎಲ್ಲ ಮಕ್ಕಳೂ ತಮ್ಮದೇ ವೇಗ ಮತ್ತು ಗತಿಯಲ್ಲಿ ಮೈಲಿಗಲ್ಲು /ಬೌದ್ಧಿಕ ಸಾಮರ್ಥ್ಯಗಳನ್ನು ಮುಟ್ಟಿದ್ದಾರೆ.

> ಪ್ರತಿ ಮಗುವೂ ಕಲಿಯಬಲ್ಲುದೆಂದು ಈ ಅನುಭವಗಳು ನಮಗೆ ತೋರಿಸಿವೆ. ನಾವು ಮಾಡಬೇಕಾದುದೆಂದರೆ ಬೋಧನೆಯ ಕುರಿತ ನಮ್ಮ ಆತಂಕಗಳನ್ನು ಕಡಿಮೆಗೊಳಿಸಿ-ಕೊಳ್ಳುವುದು, ಶಿಕ್ಷಕರಾಗಿ ನಮ್ಮ ಅಧಿಕಾರದ ಕಲ್ಪನೆಯನ್ನು ಕಾಲಕಾಲಕ್ಕೆ ಕಳಚಿಕೊಳ್ಳುವುದು, ಮಕ್ಕಳ ಅಂತರ್ಗತ ಸಾಮರ್ಥ್ಯಗಳನ್ನು ಮತ್ತು ಅವರ ಒಲವುಗಳನ್ನು ಅರಿತು-ಕೊಳ್ಳುವುದು, ಕಲಿಕೆಯನ್ನು ಅವರಿಗೆ ಅರ್ಥಪೂರ್ಣ ಮತ್ತು ಉಲ್ಲಾಸಮಯಗೊಳಿಸುವುದು, ಅವರ ಜ್ಞಾನ ಮತ್ತು ತಿಳುವಳಿಕೆಯನ್ನು ಗೌರವಿಸುವುದು ಹಾಗೂ ಅವರ ವೈಯಕ್ತಿಕತೆ ಮತ್ತು ಘನತೆಯನ್ನು ರಕ್ಷಿಸುವುದು. ಹೀಗಾದಾಗ, ಕೆಲವೇ ಸಮಯದಲ್ಲಿ ಕಲಿಕೆಯ ಹಾದಿಗಳು ತಾವಾಗಿಯೇ ತೆರೆದುಕೊಳ್ಳುತ್ತವೆ.

ಐದು ಮಕ್ಕಳ ಕುರಿತ ಪ್ರಕರಣ ಅಧ್ಯಯನದ ಮೂಲಕ ಈ ಲೇಖನದಲ್ಲಿ ನನ್ನ ವಾದಗಳನ್ನು ಪ್ರಸ್ತುತಪಡಿಸಿದ್ದೇನೆ. ಒಂದು ಶಾಲಾ ಘಟಕವಾಗಿ ಕಲಿಯಲು ನಮಗೆ ಬಹಳಷ್ಟು ಉದಾಹರಣೆಗಳು ದೊರೆತಿವೆ. ನಮ್ಮ ಕಲಿಯುವ – ಕಲಿಸುವ ಪ್ರಕ್ರಿಯೆಗಳನ್ನು ಮಕ್ಕಳ ಅಗತ್ಯಗಳ ಆಧಾರದ ಮೇಲೆ ರೂಪಿಸಿ ಮಾರ್ಪಡಿಸಿದೆವು ಹಾಗೂ ಇದರೊಂದಿಗೆ ಮಕ್ಕಳ ಕಲಿಕಾ ಸಾಧನೆಗಳು ವೇಗ ಪಡೆದವು.

ಆ ಐವರಲ್ಲಿ ರೋಹಿತ್ 7 ವರ್ಷ ವಯಸ್ಸಿನವನು. ಶಾಲೆಯ ಸಮೀಪದ ಗುಡಿಸಲೊಂದರಲ್ಲಿ ಅವರ ಕುಟುಂಬ ವಾಸಿಸುತ್ತದೆ. ಅವನ ತಂದೆ ಅನಕ್ಷರಸ್ಥರಾಗಿದ್ದು, ಕಾಲೋನಿಯಲ್ಲಿ ನೀರು ಸರಬರಾಜು ಮಾಡುವ ಮತ್ತು ನಲ್ಲಿ ರಿಪೇರಿ ಮಾಡುವವರಾಗಿ (ಪ್ಲಂಬರ್) ದುಡಿಯುತ್ತಾರೆ. ಅವನ ಅಣ್ಣ ಹೋಟೆಲೊಂದರಲ್ಲಿ ಕೆಲಸ ಮಾಡುತ್ತಾನೆ. ಅವನಿಗೆ ಒಬ್ಬ ತಂಗಿ ಇದ್ದು ಅವಳನ್ನೂ ಆತನೇ ಶಾಲೆಗೆ ಕರೆತರುತ್ತಾನೆ. ಎರಡನೆಯ ಮಗು ಬಿಂದು (8 ವರ್ಷ) ಒಂದು ಹಳ್ಳಿಯಿಂದ ಬಂದಿದ್ದು ಮರಾಠಿ ಮಾತನಾಡುತ್ತಾಳೆ. ಹಿಂದಿ ಮಾತನಾಡಲು ಮತ್ತು ಅರ್ಥಮಾಡಿಕೊಳ್ಳಲು ಬಹಳ ಪ್ರಯಾಸಪಡುತ್ತಾಳೆ. ತನಗೆ ಕಲಿಕೆ ಅಸಾಧ್ಯವೆಂದು ಅವಳು ಆತಂಕಗೊಂಡಿದ್ದಳು. ಮೂರನೆಯ ಮಗು ಕೃಷ್ಣ (8 ವರ್ಷ), ಒಂದು ದನದ ಕೊಟ್ಟಿಗೆಯಲ್ಲಿ ತನ್ನ ತಾತನೊಂದಿಗೆ ವಾಸಿಸುತ್ತಾನೆ. ಅವನು ಹತ್ತಿರದ ಒಂದು ಶಾಲೆಗೆ ಹೋಗುತ್ತಿದ್ದನು. ನಿಯಮಿತವಾಗಿ ಶಾಲೆಗೆ ಹಾಜರಾಗದೆ ಹಾಗೂ ನಿರೀಕ್ಷಿತ ಕಲಿಕಾ ಫಲಿತಗಳನ್ನು ಗಳಿಸಲಿಲ್ಲವೆಂಬ ಕಾರಣಕ್ಕೆ ಅವನನ್ನು ಶಾಲೆಯಿಂದ ಹೊರಹಾಕಲಾಗಿತ್ತು. ಅವನು ಈಗ ನಮ್ಮ ಶಾಲೆಗೆ ಬರುತ್ತಿದ್ದಾನೆ. ಆದರೆ ಅವನ ಆತ್ಮಸ್ಥೈರ್ಯ ಬಹಳವೇ ಘಾಸಿಗೊಂಡಿದೆ. ನಾಲ್ಕನೆಯ ಮಗು ಪೂಜಾ (9 ವರ್ಷ), ಅವಳಿಗೆ ಸ್ವಲ್ಪ ಶ್ರವಣದೋಷದ ಸಮಸ್ಯೆ ಇದೆ. ಅವಳಿಗೆ ಶ್ರವಣಸಾಧನ ಅಳವಡಿಸಿದರೂ, ಈಗಲೂ ಮಾತನಾಡುವ ಮತ್ತು ಆಲಿಸುವಲ್ಲಿ ತೊಂದರೆಯನ್ನು ಅನುಭವಿಸುತ್ತಿದ್ದಾಳೆ. ಅವಳು ಪ್ರತಿಷ್ಠಿತ ಖಾಸಗಿ ಶಾಲೆಯೊಂದರಲ್ಲಿ ಓದುತ್ತಿದ್ದಳು. ಆದರೆ ಆ ಶಾಲೆಯ ಆಡಳಿತ ವರ್ಗ ಅವಳು ವಿಶೇಷ ಶಾಲೆಗೆ ಹೋಗಬೇಕೆಂದು ಅಭಿಪ್ರಾಯಪಟ್ಟಿತು. ಅವಳ ಪೋಷಕರು ಸಂವೇದನಾಶೀಲರಾಗಿದ್ದರು ಮತ್ತು ಮನಶಾಸ್ತ್ರಜ್ಞರ ಸಲಹೆಯನ್ನು ಪಾಲಿಸುತ್ತಿದ್ದರು. ಹಾಗಾಗಿ ಅವಳನ್ನು ಆನಂದ್ ನಿಕೇತನ್ ಶಾಲೆಗೆ ಸೇರಿಸಲಾಯಿತು. ಐದನೇ ಮಗು ಸ್ವಾತಿ (10 ವರ್ಷ), ಇವಳಿಗೆ ಮಾತನಾಡುವುದರಲ್ಲಿ ತೊಡಕುಗಳಿದ್ದವು. ಮಾತನಾಡುವಾಗ ಉಗ್ಗುತ್ತಿದ್ದಳು, ಬಿಕ್ಕಳಿಸುತ್ತಿದ್ದಳು ಮತ್ತು ಆಗಾಗ ಮಾತು

ತೊದಲುತ್ತಿತ್ತು. ಕೀಳರಿಮೆಯ ಭಾವನೆಯೂ ಅವಳಲ್ಲಿ ಬೇರೂರಿ, ಅತಿ ಸಣ್ಣ ವಿಷಯಗಳಿಗೂ ಅಳಲು ಆರಂಭಿಸುತ್ತಿದ್ದಳು.

ಈ ಎಲ್ಲಾ ಐದು ಮಕ್ಕಳು ಆನಂದ್‌ನಿಕೇತನ್ ಶಾಲೆಯಲ್ಲಿ ಮೂರರಿಂದ ಎಂಟು ವರ್ಷಗಳ ಕಾಲ ಇದ್ದರು. ಅವರು ಶೈಕ್ಷಣಿಕ ವಿಷಯದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾದದ್ದಷ್ಟೇ ಅಲ್ಲದೆ ತಮ್ಮ ಇತರ ಸವಾಲುಗಳನ್ನೂ ಸಹಾ ಮೀರಿದರು. ಶಾಲೆಯಲ್ಲಿ ಮತ್ತು ಅದರ ಪ್ರಕ್ರಿಯೆಯಲ್ಲಿ ಅಗತ್ಯ ಬದಲಾವಣೆಗಳನ್ನು ತರುವ ಮೂಲಕ ಹಾಗೂ ನಮ್ಮ ದೃಷ್ಟಿಕೋನಗಳನ್ನು ವಿಸ್ತರಿಸಿಕೊಳ್ಳುವ ಮೂಲಕ ಪ್ರತಿ ಮಗುವೂ ತನ್ನದೇ ಆದ ವೇಗ, ಗತಿ, ಆಸಕ್ತಿ ಇವುಗಳ ಮೂಲಕ ಎಲ್ಲ ಸವಾಲುಗಳನ್ನು ಎದುರಿಸಿಯೂ ನಿರೀಕ್ಷಿತ ಶೈಕ್ಷಣಿಕ ಮಟ್ಟವನ್ನು ಮುಟ್ಟಬಹುದಾದಂತಹ ವಾತಾವರಣವನ್ನು ರೂಪಿಸಬಹುದು ಎಂಬ ವಿಶ್ವಾಸವನ್ನು ನಾವು ಕಂಡುಕೊಂಡೆವು.

ಏಳು ವರ್ಷದ ರೋಹಿತ್ ತನ್ನ ಬಣ್ಣ ಮತ್ತು ಕೂದಲಿನಿಂದಾಗಿ ಬಹಳ ಅಭದ್ರತೆಯನ್ನು ಅನುಭವಿಸುತ್ತಿದ್ದನು. ಶಾಲೆಯಲ್ಲಿ ಯಾರೊಡನೆಯೂ ಬೆರೆಯದೇ ಮೌನವಾಗಿ ಇರುತ್ತಿದ್ದನು. ಅವನು ಶಾಲೆಗೆ ಪ್ರತಿದಿನ ಬರುತ್ತಿರಲಿಲ್ಲ. ಶಾಲೆಯ ಸಮೀಪದ ಸ್ಲಂನಲ್ಲಿರುವ ಗುಡಿಸಲೊಂದರಲ್ಲಿ ಅವನು ವಾಸಿಸುತ್ತಿದ್ದನು. ಶಾಲೆಗೆ ಬರುವ ದಾರಿಯಲ್ಲಿಯೇ ಈ ಗುಡಿಸಲು ಇದ್ದಿದ್ದರಿಂದ ಈ ಅಂಶವೂ ಅವನು ಕೀಳರಿಮೆ ಅನುಭವಿಸುವಂತೆ ಮಾಡಿತು. ಅವನ ತಾಯಿಯು ನಗರವನ್ನು ತೊರೆದು ತನ್ನ ಹಳ್ಳಿಗೆ ತಿರುಗಿ ಹೋಗಿದ್ದಳು. ಒಡಹುಟ್ಟಿದವರು ಸೇರಿ ಅಡುಗೆ ಮಾಡುತ್ತಿದ್ದರು. ಅವರ ತಂದೆಯೂ ಕೆಲಸದ ಕಾರಣದಿಂದಾಗಿ ಹೆಚ್ಚಿನ ಸಮಯ ಮನೆಯಿಂದ ದೂರವಿರುತ್ತಿದ್ದರು. ಅವರ ಅಣ್ಣ ರಾಜ್ ಕೂಡ ಕೆಲಸಕ್ಕೆ ಹೋಗುತ್ತಿದ್ದ. ಇಂತಹ ಸನ್ನಿವೇಶದಲ್ಲಿ ತಂಗಿ ಒಬ್ಬಳನ್ನೇ ಮನೆಯಲ್ಲಿ ಬಿಡುವುದು ಕಷ್ಟವಾಗುತ್ತಿತ್ತು. ಅವನು ಅವಳನ್ನೂ ಶಾಲೆಗೆ ಕರೆತರಬಹುದು ಎಂದು ಹೇಳಿದೆವು. ಇನ್ನಿತರ ಎಷ್ಟೋ ಪುಟ್ಟ ಮಕ್ಕಳು ಶಾಲೆಗೆ ಬರುತ್ತಿದ್ದರು. ಅವನ ತಂಗಿಯು ಆ ಮಕ್ಕಳೊಂದಿಗೆ ಆಡುತ್ತಿದ್ದಳು. ಇದರಿಂದಾಗಿ ಅವನು ದಿನವೂ ಶಾಲೆಗೆ ಬರಲಾರಂಭಿಸಿದ ಮತ್ತು ಶಾಲೆಯಲ್ಲಿ ನಿರಾಳತೆಯನ್ನು ಅನುಭವಿಸಿದ.

ಆಟದ ಮೈದಾನದಲ್ಲಿ ಹಾಗೂ ಮರಗಳನ್ನು ಹತ್ತುವುದರಲ್ಲಿ ಯಾರೂ ಅವನನ್ನು ಸರಿಗಟ್ಟಲು ಆಗುತ್ತಿರಲಿಲ್ಲ. ಆದರೆ ಓದುವುದರತ್ತ ಅವನ ಆಸಕ್ತಿಯನ್ನು ಹರಿಸಲಿಲ್ಲ. ಶಿಕ್ಷಕರಾದ ನಾವು ರೋಹಿತ್‌ನ ಸಮಸ್ಯೆಯನ್ನು ಅರಿತುಕೊಳ್ಳಲು ನಮ್ಮಲ್ಲಿಯೇ ಮಾತನಾಡಿ–ಕೊಂಡೆವು. ಒಂದು ಕಬಡ್ಡಿ ತಂಡವನ್ನು ಕಟ್ಟಲು ನಿರ್ಧರಿಸಿದೆವು. ಮುಂದೆ ಶಾಲೆಯ ಸಮಯ ಮುಗಿದ ನಂತರ ಪ್ರತಿದಿನ ಅರ್ಧ ಗಂಟೆಗಳ ಕಾಲ ಕಬಡ್ಡಿ ಆಡುತ್ತಿದ್ದೆವು. ಇಲ್ಲಿ ಅಮೋಘ ನಾಯಕತ್ವ ಗುಣವು ರೋಹಿತ್‌ನಲ್ಲಿ ಮೊಳಕೆಯೊಡೆಯಿತು. ಇದರಿಂದ ಅವನು ಬಹಳಷ್ಟು ಸ್ನೇಹಿತರನ್ನು ಸಂಪಾದಿಸಲು ಸಾಧ್ಯವಾಯಿತಷ್ಟೇ ಅಲ್ಲದೆ ತನ್ನ ಓರಗೆಯವರೊಡನೆ ಪ್ರಭಾವಿ ಇರುವಿಕೆಯನ್ನು ಸಾಧಿಸಲು ಸಾಧ್ಯವಾಯಿತು. ಆ ಮಕ್ಕಳಲ್ಲಿ ಈಗವನು ಎಲ್ಲರ ಮೆಚ್ಚಿನವನಾಗಿದ್ದ ಮತ್ತು ಎಲ್ಲಾ ಮಕ್ಕಳು ಅವನಿರುವ ತಂಡವನ್ನು ಸೇರಲು ಆಶಿಸುತ್ತಿದ್ದರು.

ಅವನು ಹಲವಾರು ಪಕ್ಷಿಗಳು ಮತ್ತು ಪ್ರಾಣಿಗಳ ಧ್ವನಿಯನ್ನು ಅನುಕರಿಸುತ್ತಿದ್ದನು. ಮಕ್ಕಳೆಲ್ಲ ಸೇರಿ ಒಂದು ಕಿರುಚಿತ್ರವನ್ನು ಚಿತ್ರೀಕರಿಸಲು ಅಣಿಯಾದರು. ಹಿನ್ನೆಲೆ ಸಂಗೀತವನ್ನು ರೋಹಿತ್ ಒದಗಿಸಿದನು. ಹಲವಾರು ಧ್ವನಿಗಳನ್ನು ಅಂದರೆ ಕಾಡಿನ, ನೀರು ಸುರಿಯುತ್ತಿರುವ, ಪಕ್ಷಿಗಳ, ನಾಯಿಗಳ ಮತ್ತು ಹಸುಗಳ, ಮೋಟಾರು ಬೈಕುಗಳ, ರೈಲುಗಳ ಹಾಗೂ ಪಾತ್ರೆಗಳ ಹೀಗೆ ಹಲವಾರು ಧ್ವನಿಗಳನ್ನು ಸೃಷ್ಟಿಸಿದನು. ಅವನು ಕೆಲವನ್ನು ಮಿಮಿಕ್ರಿಯ ಮೂಲಕ ಮಾಡಿದರೆ ಉಳಿದವನ್ನು ತನ್ನದೇ ವಿನೂತನ ವಿಧಾನದಲ್ಲಿ ನಿರ್ಮಿಸಿದನು.

ಆನ್ವಯಿಕ ಗಣಿತದಲ್ಲಿ ರೋಹಿತ್ ಸಮರ್ಥನಾಗಿದ್ದನು. ಗಣಿತ ಶಿಕ್ಷಕರು ಅವನ ಪ್ರತಿದಿನದ ಬದುಕಿಗೆ ಸಂಬಂಧಿಸಿದಂತೆ ಹಲವಾರು ಸಮಸ್ಯೆಗಳನ್ನು ರಚಿಸಿ ಕೇಳಿದಾಗ, ಅವನು ಅವುಗಳನ್ನು ಸರಾಗವಾಗಿ ಪರಿಹರಿಸಿದನು. ಅವನು ಪ್ರತಿದಿನ ಶಾಲೆಗೆ ಬರಲಾರಂಭಿಸಿದ್ದರಿಂದ ಇತರ ಮಕ್ಕಳೊಡನೆ ಸ್ನೇಹ ಮತ್ತು ಶಿಕ್ಷಕರೊಂದಿಗೆ ಬಾಂಧವ್ಯ ಬೆಳೆಯಿತು ಮತ್ತು ಇವು ಅವನು ತರಗತಿಯನ್ನು ಆನಂದಿಸುವಂತೆ ಮಾಡಿದವು. ಅವನು ತನ್ನ ಕಲಿಕೆಯೆಡೆಗೆ ಗಮನಹರಿಸಲು ಪ್ರಾರಂಭಿಸಿದನು. ಗಣಿತದೊಡನೆ ಹಿಂದಿ ಮತ್ತು ಇಂಗ್ಲಿಷನ್ನು ಕೂಡ ಕಲಿತನು. ಆದರೆ ಸಮಾಜ ವಿಜ್ಞಾನವನ್ನು, ವ್ಯಕ್ತಿಗಳು ಮತ್ತು ಸರ್ಕಾರ ಇವುಗಳ ನಡುವಣ ಸಂಬಂಧಗಳನ್ನು ಅವನ ಬದುಕಿನ ಉದಾಹರಣೆಗಳ ಮೂಲಕ ವಿವರಿಸಿದಾಗ ಬಲುಬೇಗನೆ ಅದು ಅವನ ಆಸಕ್ತಿಯ ವಿಷಯವಾಯಿತು. ಸಮಾಜ ವಿಜ್ಞಾನದ ಅಧ್ಯಯನ ಯೋಜನೆಗಾಗಿ ಅವನು ಶಾಲೆಯ ಸಮೀಪದಲ್ಲಿ ಹರಿಯುತ್ತಿದ್ದ ಒಂದು ಕಾಲುವೆಯನ್ನು ಆಯ್ಕೆ ಮಾಡಿಕೊಂಡನು. ಅದು ಆರಂಭವಾಗುವ ಜಾಗದಿಂದ ಹಿಡಿದು ಅದು ಎಲ್ಲಿಗೆ ಹೋಗುತ್ತದೆ ಹಾಗೂ ಎಷ್ಟು ಕವಲುಗಳನ್ನು ಪಡೆಯುತ್ತದೆ ಎಂಬುದನ್ನೆಲ್ಲಾ ಗಮನಿಸಿದನು. ನೀರು ಹರಿಯುವ ಕಾಲಗಳನ್ನು ಸಹ ಅವರು ಅಧ್ಯಯನ ಮಾಡಿದರು. ಇದರಿಂದ ನೀರು ಯಾವ ತಿಂಗಳಲ್ಲಿ ಹರಿಯುತ್ತದೆ ಮತ್ತು ಯಾವ ತಿಂಗಳುಗಳಲ್ಲಿ ಕಾಲುವೆ ಒಣಗಿರುತ್ತದೆ ಎಂದು ಕಂಡುಕೊಂಡರು. ಎಷ್ಟು ಜನ ರೈತರು ತಮ್ಮ ಬೆಳೆಗಾಗಿ ಕಾಲುವೆಯನ್ನು ನೆಚ್ಚಿಕೊಂಡಿದ್ದಾರೆ ಎಂದು ಗಮನಿಸಿ ತನ್ನ ಬದುಕು ಮತ್ತು ತನ್ನ ಸುತ್ತಲಿನವರ ಬದುಕಿಗೆ ಕಾಲುವೆ ಎಷ್ಟು ಮುಖ್ಯ ಎಂದು ವಿಶ್ಲೇಷಿಸಿದರು. ಯೋಜನೆಗೆ ಮಾಡಿದ ಕೆಲಸವನ್ನು ತುಂಬಾ ಸುಂದರವಾಗಿ ರೂಪಿಸಿ ತರಗತಿಯಲ್ಲಿ ಎಲ್ಲರ ಮುಂದೆ ಪ್ರದರ್ಶನಕ್ಕೆ ಇಟ್ಟನು.

ರೋಹಿತ್ ಆರು ವರ್ಷಗಳ ಕಾಲ ಶಾಲೆಯಲ್ಲಿ ಇದ್ದನು. ಈ ಸಮಯದಲ್ಲಿ ಅವನು ಎಲ್ಲಾ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದನು. ಸ್ಲಂ ನೆಲಸಮವಾದ ನಂತರ ರೋಹಿತ್ ಮತ್ತು ಅವನ ಕುಟುಂಬ ಶಾಲೆಯಿಂದ ಬಲುದೂರ ಬೇರೆಡೆಗೆ ಸ್ಥಳಾಂತರವಾಗಬೇಕಾಯಿತು. ಅಲ್ಲಿಗೆ ಸಮೀಪದ ಸರ್ಕಾರಿ ಶಾಲೆಯೊಂದರಲ್ಲಿ ಅವನು 7ನೇ ತರಗತಿಗೆ ದಾಖಲಾದನು. ನಂತರ ಒಮ್ಮೆ ಅವನು ಶಾಲೆಗೆ ಕೂಡ ಭೇಟಿ ನೀಡಿದ್ದನು.

ಎಂಟು ವರ್ಷದ ಬಿಂದು ಮಹಾರಾಷ್ಟ್ರದ ಒಂದು ಹಳ್ಳಿಯಿಂದ ಬಂದಿದ್ದಳು. ಅವಳಿಗೆ ಹಿಂದಿ ಸ್ವಲ್ಪಮಟ್ಟಿಗೆ ಅರ್ಥವಾಗುತ್ತಿತ್ತು. ಆದರೆ ಹಿಂದಿಯಲ್ಲಿ ಮಾತನಾಡುವುದು ಅವಳಿಗೆ ಬಹಳ ಪ್ರಯಾಸದ ವಿಷಯವಾಗಿತ್ತು. ಹಿಂದಿಯನ್ನು ಓದುವುದು ಮತ್ತು ಬರೆಯುವುದು ಇಲ್ಲವೇ ಇಲ್ಲ ಎನ್ನುವಂತಿತ್ತು. ಹಿಂದಿ ಶಿಕ್ಷಣ ಮಾಧ್ಯಮವಾಗಿದ್ದ ತರಗತಿಯಲ್ಲಿ ಅವಳು ಮೊದಲಿಗೆ ಕಷ್ಟಪಡುತ್ತಿದ್ದಳು. ಸುಮಾರು ಒಂದು ತಿಂಗಳು ತರಗತಿಯಲ್ಲಿ ಅನಾಸಕ್ತಿಯಿಂದ, ಯಾರೊಂದಿಗೂ ಮಾತನಾಡದೆ ಅಥವಾ ಅವಳಿಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲು ಇಷ್ಟವಿಲ್ಲದೆ ಕುಳಿತಿರುತ್ತಿದ್ದಳು. ಮನೆಯಲ್ಲಿ ದಿನವೂ ಅಳುತ್ತಾಳೆ ಮತ್ತು ಇದೇ ರೀತಿ ಮುಂದುವರೆಯಲು ಸಾಧ್ಯವಾಗುವುದಿಲ್ಲ ಎಂದು ಗೋಗರೆಯುತ್ತಾಳೆ ಎಂದು ಅವಳ ತಾಯಿ ತಿಳಿಸಿದರು. ತನಗೆ ಎಂದಿಗೂ ಓದಲು ಮತ್ತು ಕಲಿಯಲು ಸಾಧ್ಯವಾಗದು ಎಂಬ ಚಿಂತೆಯಿಂದ ಅವಳು ತುಂಬಾ ನಿರಾಸೆಗೊಂಡಿದ್ದಳು.

ಶಿಕ್ಷಕರು ಒಟ್ಟಾಗಿ ಸೇರಿ ಚರ್ಚಿಸಿ ಅವಳಿಗೋಸ್ಕರ ಒಂದು ಯೋಜನೆಯನ್ನು ತಯಾರಿಸಿದರು. ನಮ್ಮಲ್ಲಿನ ಒಬ್ಬ ಸಹಶಿಕ್ಷಕರು ಮರಾಠಿ ಬಲ್ಲವರಾಗಿದ್ದರು. ಬಿಂದುವಿನೊಡನೆ ನಿಧಾನವಾಗಿ ಸಂವಾದವನ್ನು ಆರಂಭಿಸುವ ಜವಾಬ್ದಾರಿಯನ್ನು ಅವರಿಗೆ ನೀಡಲಾಯಿತು. ಅದೇ ಸಮಯದಲ್ಲಿ ನಾವು ಎರಡು ಮರಾಠಿ ಹಾಡುಗಳನ್ನು ಹುಡುಕಿಕೊಂಡು ಅವುಗಳನ್ನು ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ಹಾಡಲು ಆರಂಭಿಸಿದೆವು. ನಮ್ಮ ಬೆಳಗಿನ ಸಭೆಗಳು ಅನೌಪಚಾರಿಕ, ಮುಕ್ತ ಮತ್ತು ಸ್ವಇಚ್ಛೆಯ ವೇದಿಕೆಯಾಗಿ ಬಹಳಷ್ಟು ಸಾಧ್ಯತೆಗಳಿಂದ ಕೂಡಿತ್ತು. ಇದರಲ್ಲಿ ಗುಂಪು ಚಟುವಟಿಕೆಗಳಿದ್ದು ಎಲ್ಲರಿಗೂ ಅವಕಾಶ ದೊರೆಯುತ್ತಿತ್ತು. ಮರಾಠಿ ಹಾಡಿನ ಸಮಯ ಬಂದಾಗ ಬಿಂದು ಅತ್ಯಂತ ಉತ್ಸಾಹದಿಂದ ಭಾಗವಹಿಸುತ್ತಿದ್ದಳು, ಅಷ್ಟೇ ಅಲ್ಲದೆ ಈ ಹಾಡನ್ನು ಮುನ್ನಡೆಸುವ ಜವಾಬ್ದಾರಿಯನ್ನು ಅವಳಿಗೇ ನೀಡಲಾಯಿತು. ನಿಜವೆಂದರೆ, ಅವಳು ಮಕ್ಕಳಿಗೆ ಹೊಸ ಹಾಡುಗಳನ್ನು ಪರಿಚಯಿಸಿದಳು. ವೇದಿಕೆ ಚಟುವಟಿಕೆಯಲ್ಲಿ ಮಕ್ಕಳು ತಮ್ಮ ಹಿಂದಿನ ದಿನದ ಶಾಲಾ ಅನುಭವಗಳನ್ನು ಹಂಚಿಕೊಳ್ಳುತ್ತಾರೆ. ಬಿಂದುವಿಗೆ ತನ್ನ ಅನುಭವವನ್ನು ಮರಾಠಿಯಲ್ಲಿ ಹಂಚಿಕೊಳ್ಳಲು ಅನುವು ಮಾಡಿಕೊಡಲಾಯಿತು. ಇದನ್ನು ನಂತರದಲ್ಲಿ ಮರಾಠಿ ಬಲ್ಲ ಶಿಕ್ಷಕರು ಇತರ ಮಕ್ಕಳಿಗೆ ಹಿಂದಿಗೆ ಅನುವಾದಿಸಿ ಹೇಳುತ್ತಿದ್ದರು.

ಅಷ್ಟೇ ಅಲ್ಲದೆ ಹಲವಾರು ಮರಾಠಿ ಜಾನಪದ ಕಥೆಗಳನ್ನು ಹುಡುಕಿ ತರಗತಿಯಲ್ಲಿ ಹೇಳಲಾರಂಭಿಸಿದೆವು. ಇವುಗಳಲ್ಲಿ ಕೆಲವನ್ನು ಅವಳು ಈ ಹಿಂದೆಯೂ ಕೇಳಿದ್ದರಿಂದ ಹಾಗೂ ಅದನ್ನು ಬಹಳ ಆನಂದಿಸಲು ಆರಂಭಿಸಿದಳು. ಅಲ್ಪಸ್ವಲ್ಪ ತಿಳಿದಿದ್ದ ಹಿಂದಿಯನ್ನು, ಬಹಳಷ್ಟು ಮರಾಠಿ ಪದಗಳನ್ನು ಉಪಯೋಗಿಸಿ ಈ ಜಾನಪದ ಕಥೆಗಳ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳನ್ನು ತನ್ನ ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತಿದ್ದಳು. ಇದು ಅವಳ ಆತ್ಮಸ್ಥೈರ್ಯವನ್ನು ಬಹಳ ಹೆಚ್ಚಿಸಿತು. ತನಗೆ ಕೇವಲ ಮರಾಠಿಯಷ್ಟೇ ಬರುತ್ತದೆಂಬ ಕೀಳರಿಮೆಯನ್ನು ಹೋಗಲಾಡಿಸಿ ಓರಗೆಯವರೊಂದಿಗೆ ಗೆಳೆತನವನ್ನು ಬೆಳೆಸಲು ಆಕೆಗೆ ಸಾಧ್ಯವಾಯಿತು. ನಂತರದಲ್ಲಿ ಅವಳು ಹಿಂದಿ, ವಿಜ್ಞಾನ ಮತ್ತು ಗಣಿತವನ್ನು ಕಲಿಯುವ ಸವಾಲನ್ನು ಎತ್ತಿಕೊಂಡಳು. ಕಲಿಯಲು ಒಮ್ಮೆ ಅವಳು ಮುಂದಡಿ ಇಟ್ಟಾಗ ಶಾಲೆಯು ಅವಳಿಗೆ ಸಹಕರಿಸಿತು. ಕೆಲವೇ ಸಮಯದಲ್ಲಿ ಬಿಂದು ಹಿಂದಿಯಲ್ಲಿ ಮಾತನಾಡಲು, ಅಷ್ಟೇ ಅಲ್ಲ ನಂತರದಲ್ಲಿ ಓದಲು ಮತ್ತು ಬರೆಯಲು ಕೂಡ ಕಲಿತಳು. ಶಾಲೆಯು ಅವಳನ್ನು ಮುಕ್ತವಾಗಿ ಬರಮಾಡಿಕೊಂಡಿತು ಹಾಗೂ ಅವಳು ಕೂಡ ಶಾಲೆಯನ್ನು ಸ್ವೀಕರಿಸಿದಳು. ಮುಂದಿನ ಕೆಲವು ವರ್ಷಗಳಲ್ಲಿ ಬಿಂದು ಶಾಲೆಗೆ ನಿಯಮಿತವಾಗಿ ಬರುವ ವಿದ್ಯಾರ್ಥಿಯಾದಳು ಹಾಗೂ ವೇಗವಾಗಿ ಕಲಿಯುವ ಮಕ್ಕಳಲ್ಲಿ ಒಬ್ಬಳಾದಳು. ಈಗ ಬಿಂದು ಇಂಗ್ಲಿಷ್‌ನಲ್ಲಿಯೂ ಸಂವಾದ ನಡೆಸಬಲ್ಲಳು. ಅವಳು ಹಿಂದಿಯಲ್ಲಿ ಪದ್ಯಗಳನ್ನು, ಕತೆಗಳನ್ನು ಕೂಡ ಬರೆದಿದ್ದಾಳೆ. ಅವಳು ನಿರಂತರವಾಗಿ ಸಂಗೀತ ತರಗತಿಗೆ ಬಂದದ್ದರಿಂದ ಹಾಗೂ ಹಾಡುವ ಬಗ್ಗೆ ಅಮಿತ ಉತ್ಸಾಹ ಬೆಳೆಸಿಕೊಂಡಿದ್ದರಿಂದ ಸಂಗೀತದಲ್ಲಿ ಅವಳಿಗೆ ಔಪಚಾರಿಕ ತರಬೇತಿಯನ್ನು ನೀಡಲು ಆರಂಭಿಸಲಾಯಿತು. ಶಾಲೆಯ ನಾಟಕಗಳಲ್ಲಿಯೂ ಅವಳು ಪಾತ್ರ ವಹಿಸಲು ಆರಂಭಿಸಿದಳು ಹಾಗೂ ರಿಂಚಿನ್ ಅವರ 'ಐ ವಿಲ್ ಸೇವ್ ಮೈ ಲ್ಯಾಂಡ್' ಎಂಬ ಪುಸ್ತಕ ಆಧಾರಿತ ನಾಟಕದಲ್ಲಿ ಮಾಟಿ ಎಂಬ ನಾಯಕಿಯ ಪಾತ್ರವನ್ನು ವಹಿಸಿದ್ದ ಅವಳು ಅದ್ಭುತವಾಗಿ ನಟಿಸಿದಳು. ಈ ವರ್ಷ ಬಿಂದು 8ನೇ ತರಗತಿಯನ್ನು ದಾಟಿದ್ದಾಳೆ. ಅವಳು ತನ್ನ ಕಲಿಕೆಯನ್ನು ಮುಂದುವರೆಸಲು ಬೇರೆಯ ಶಾಲೆಯನ್ನು ಸೇರುವ ತಯಾರಿಯಲ್ಲಿದ್ದಾಳೆ.

ಎಂಟು ವರ್ಷದ ಕೃಷ್ಣನು ತನ್ನ ಅಜ್ಜಿ–ತಾತನೊಂದಿಗೆ ಒಂದು ದನದ ಕೊಟ್ಟಿಗೆಯಲ್ಲಿ ವಾಸಿಸುತ್ತಾನೆ. ಮೂರನೇ ತರಗತಿಯವರೆಗೆ ಅವನು ಹತ್ತಿರದ ಖಾಸಗಿ ಶಾಲೆಗೆ ಹೋಗುತ್ತಿದ್ದನು. ಶಾಲೆಗೆ ಸರಿಯಾಗಿ ಹಾಜರಾಗದೆ ನಿರೀಕ್ಷಿತ ಕಲಿಕಾ ಮಟ್ಟವನ್ನು ಮುಟ್ಟಲಿಲ್ಲ ಎಂದು ಅವನನ್ನು ಶಾಲೆಯಿಂದ ಹೊರಹಾಕಲಾಗಿತ್ತು.

ಬೆಳಗ್ಗೆ 4 ಗಂಟೆಗೆ ಎದ್ದು ದನಗಳಿಗೆ ಮೇವು ತರಲು ಹೋಗುವುದರೊಂದಿಗೆ ಕೃಷ್ಣನ ದಿನಚರಿ ಆರಂಭವಾಗುತ್ತದೆ, 7 ಗಂಟೆಯೊಳಗೆ ಕೊಟ್ಟಿಗೆಯನ್ನು ಶುಚಿಗೊಳಿಸಲು ಮತ್ತು ಹಾಲು ಕರೆದು ಮುಗಿಸಲು ಅಜ್ಜಿ–ತಾತನಿಗೆ ಸಹಾಯ ಮಾಡುತ್ತಾನೆ. ಜನರು ಹಾಲು ಕೊಳ್ಳಲು ಬರಲಾರಂಭಿಸುತ್ತಾರೆ. ಅವನು ತನ್ನ ಸೈಕಲ್ಲಿನ ಮೇಲೆ ಹಲವು ಮನೆಗಳಿಗೆ ಹಾಲು ಹಾಕಲು ಹೋಗುತ್ತಾನೆ. ನಂತರ 8 ಗಂಟೆಯ ಹೊತ್ತಿಗೆ ಅಡುಗೆಮನೆಯಲ್ಲಿ ಅಜ್ಜಿಗೆ ಸಹಾಯ ಮಾಡುತ್ತಾನೆ. ಮನೆಯಲ್ಲಿ ಸಿದ್ಧಪಡಿಸಿದ ಆಹಾರವನ್ನು ತಿಂದು 9:30ಕ್ಕೆ ಶಾಲೆಗೆ ಬರುತ್ತಾನೆ.

ಶಾಲೆಗೆ ಬರಲಾರಂಭಿಸಿದಾಗ ಅವನಿಗೆ ಏನನ್ನೂ ಅರ್ಥ–ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆನ್ವಯಿಕ ಗಣಿತದಲ್ಲಿ ಅವನು ಮುಂದಿದ್ದು ತರಗತಿಯಲ್ಲಿ ಕೊಟ್ಟ ಕೆಲಸವನ್ನು ಬೇಗನೆ ಮಾಡಿ ಮುಗಿಸುತ್ತಿದ್ದ. ವಿಜ್ಞಾನ ಪ್ರಯೋಗಗಳಲ್ಲಿಯೂ ಅವನು ಆಸಕ್ತಿ ತೋರಿಸಿದ. ಆದರೆ ಇತರ ವಿಜ್ಞಾನ ತರಗತಿಗಳು ಅವನಿಗೆ ಹೆಚ್ಚು ಆಸಕ್ತಿಯನ್ನು ಕೆರಳಿಸಲಿಲ್ಲ. ಕೃಷ್ಣನ ಬಗ್ಗೆ ವಿಚಾರ ವಿನಿಮಯ ನಡೆಸಿದ ಶಿಕ್ಷಕರು ಅವನೊಂದಿಗೆ ವಿಭಿನ್ನ ರೀತಿಯಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಿದರು.

ಪರಿಸರ ಅಧ್ಯಯನದ ತರಗತಿಯ ಒಂದು ಮಕ್ಕಳ ಗುಂಪನ್ನು ರಚಿಸಿ ಹತ್ತಿರದ ಡೈರಿಗೆ ಹೋಗಿ ಅಲ್ಲಿನ ಆಗುಹೋಗುಗಳ ಬಗ್ಗೆ, ಅಲ್ಲಿನ ಕೆಲಸದ ಬಗ್ಗೆ ತಿಳಿದುಕೊಂಡು ಬರಲು ಸೂಚಿಸಲಾಯಿತು. ಆ ಗುಂಪಿಗೆ ಸಹಾಯ ಮಾಡಲು ಕೃಷ್ಣನಿಗೆ ಜವಾಬ್ದಾರಿ ನೀಡಲಾಯಿತು. ಬಹಳ ಉತ್ಸುಕತೆಯಿಂದ ಯೋಜನೆಯಲ್ಲಿ ತೊಡಗಿಸಿಕೊಂಡ ಕೃಷ್ಣನು, ಮಕ್ಕಳು ಅಜ್ಜಿ–ತಾತನೊಂದಿಗೆ ಮಾತನಾಡಲು ನೆರವಾದನು. ಒಂದು ಡೈರಿಯ ಕೆಲಸದ ಎಲ್ಲ ವಿವರಗಳನ್ನು ನೀಡಿದನು – ದನಗಳಿಗೆ ನೀಡುವ ಮೇವಿನ ಪ್ರಮಾಣ ಮತ್ತು ಅದರ ಬೆಲೆ ದೊರಕುವ ಹಾಲಿನ ಪ್ರಮಾಣ, ಹಾಲು ಮಾರುವುದರಿಂದ ದೊರೆಯುವ ಹಣದ ಪ್ರಮಾಣ, ಔಷಧ ಮತ್ತು ದುಡಿಮೆಗಾರರ ಖರ್ಚು ಪರಿಶ್ರಮ ಮುಂತಾದವುಗಳ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿದನು. ಮಕ್ಕಳು ಬಹಳ ಸಂತೋಷಪಟ್ಟರು, ಕೃಷ್ಣನೂ ಸಹ ಬಹಳ ಖುಷಿಪಟ್ಟನು. ಇದು ಅವನ ಆತ್ಮಸ್ಥೈರ್ಯವನ್ನು ಹೆಚ್ಚಿಸಿ, ಇತರ ಮಕ್ಕಳೊಂದಿಗಿನ ಅವನ ಸ್ನೇಹವನ್ನು ಹೆಚ್ಚಿಸಿತು. ಇದರಿಂದ ಶಾಲೆಯೊಳಗಿನ ಬೋಧನಾ–ಕಲಿಕೆಯ ಪ್ರಕ್ರಿಯೆಯಲ್ಲಿ ಅವನ ತೊಡಗಿಸಿಕೊಳ್ಳುವಿಕೆ ಸಹ ಹೆಚ್ಚಿತು.

ಹೊರಗೆ ಸುತ್ತಾಡುತ್ತಿರುವಾಗ ಕೃಷ್ಣನು ಸಾಮಾನ್ಯವಾಗಿ ಹಳೆಯ ಮೋಟಾರ್, ಸೆಲ್ಲುಗಳು, ವೈರುಗಳು ಮತ್ತು ರಸ್ತೆಯಲ್ಲಿ ಎಸೆಯಲಾದ ಇತರೆ ವಸ್ತುಗಳನ್ನು ಶೇಖರಿಸುತ್ತಿದ್ದನು. ಒಂದು ದಿನ ಅವನಿಗೆ ರೇಡಿಯೋದ ಸರ್ಕ್ಯೂಟ್ ಬೋರ್ಡ್ ಸಿಕ್ಕಿತು ಮತ್ತು ಅದನ್ನು ಶಾಲೆಗೆ ತಂದನು. ಒಬ್ಬ ಶಿಕ್ಷಕರ ಸಹಾಯದೊಂದಿಗೆ ಅದು ಏನು ಎಂಬುದನ್ನು ಅರಿತುಕೊಂಡರು. ಹೊಸ ಬ್ಯಾಟರಿ ಸೆಲ್ಲುಗಳನ್ನು ಶಾಲೆಯಿಂದ ಕಡ ಪಡೆದು ಕೆಲವು ವೈರುಗಳನ್ನು ಸೇರಿಸಿ ಮತ್ತು ಅದನ್ನು ಹಳೆಯ ಸ್ಪೀಕರ್‌ಗೆ ಜೋಡಿಸಿ ರೇಡಿಯೋ ಸಿದ್ಧಪಡಿಸಿದನು. ಭೋಪಾಲಿನ ಒಂದು ಎಫ್‌ಎಂ ರೇಡಿಯೋ ಚಾನೆಲ್ ಪ್ರಸಾರವಾಗುವ ಸಿಗ್ನಲ್ ಸಿಕ್ಕಿದಾಗ ಕೃಷ್ಣನ ಆನಂದಕ್ಕೆ ಪಾರವೇ

ಇರಲಿಲ್ಲ. ಎಲ್ಲಾ ಮಕ್ಕಳು ಅವನನ್ನು ಹೊಗಳಿದರು. ಶಾಲೆಯ ಮಧ್ಯದ ಆವರಣದಲ್ಲಿ ಅದನ್ನು ಒಂದು ಟೇಬಲ್ಲಿನ ಮೇಲೆ ಇರಿಸಲಾಯಿತು. ಮಕ್ಕಳೆಲ್ಲ ಅದರ ಸುತ್ತ ಸೇರಿ ರೇಡಿಯೋದಲ್ಲಿ ಬರುತ್ತಿದ್ದ ಹಾಡು ಕೇಳಿದರು. ಆವತ್ತು ಕೃಷ್ಣನು ಶಾಲೆಯಲ್ಲಿ ಕೇಂದ್ರ ಬಿಂದುವಾಗಿದ್ದನು.

ಮಾರನೆಯ ದಿನ ಶಿಕ್ಷಕರು ರೇಡಿಯೋ ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ತರಗತಿಯಲ್ಲಿ ವಿವರಿಸಿದರು. ಅಂದಿನಿಂದ ಕೃಷ್ಣ ತಪ್ಪದೇ ಪ್ರತಿದಿನ ಶಾಲೆಗೆ ಬರಲು ಪ್ರಾರಂಭಿಸಿದನು. ಅವನು ಎಲ್ಲವನ್ನೂ ಕಲಿಯಲು ಉತ್ಸುಕನಾಗಿದ್ದನು. ಶಾಲೆಯ ಅವಧಿಯ ನಂತರವೂ ಶಾಲೆಯಲ್ಲಿ ಶಿಕ್ಷಕರೊಂದಿಗೆ ಉಳಿದು ತನ್ನೆಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುತ್ತಾ ಗ್ರಹಿಕೆಯನ್ನು ಬೆಳೆಸಿ–ಕೊಳ್ಳುತ್ತಿದ್ದನು. ಕೃಷ್ಣನು ದೋಣಿಯ ಮೂರು ಬೇರೆ ಪ್ರಕಾರಗಳ ಮಾದರಿಗಳನ್ನು ರಚಿಸಿ ಶಾಲೆಯಲ್ಲಿ ನಡೆದ ಉಮಂಗ್ ವಿಜ್ಞಾನ ಮೇಳದಲ್ಲಿ ಇವುಗಳನ್ನು ಎಲ್ಲರಿಗೂ ತೋರಿಸಿದನು. ಮೊದಲ ಮಾದರಿಯಲ್ಲಿ ಬಲೂನಿನಿಂದ ವಿರುದ್ಧ ದಿಕ್ಕಿನಿಂದ ಹೊರಗೆಡಹುವ ಗಾಳಿಯ ಬಲವನ್ನು ಉಪಯೋಗಿಸಿ ದೋಣಿಯನ್ನು ಮುನ್ನಡೆಸಿ ಎರಡನೆಯ ಮಾದರಿಯಲ್ಲಿ ಒಂದು ರಬ್ಬರ್ ಬ್ಯಾಂಡನ್ನು ಉಪಯೋಗಿಸಿ ಪೆಡಲ್ ದೋಣಿಯನ್ನು ಮಾಡಿದನು. ಮೂರನೆಯದರಲ್ಲಿ ಹಳೆಯ ಮೋಟರುಗಳನ್ನು ಉಪಯೋಗಿಸಿ ದೋಣಿಯ 2 ಕಡೆಗೂ ಪ್ರೊಪೆಲರುಗಳನ್ನು (ಚಕ್ರ) ರಚಿಸಿದ. ಮೇಳಕ್ಕೆ ಬಂದವರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಸಮರ್ಪಕವಾಗಿ ಉತ್ತರಿಸಿದನು.

ಇದರಿಂದ ಶಿಕ್ಷಕರೊಂದಿಗಿನ ಬಾಂಧವ್ಯ ಮತ್ತು ಅವರೆಡೆಗಿನ ನಂಬಿಕೆಯು ಹೆಚ್ಚಿತು. ಶಾಲೆಯ ಬೋಧನಾ–ಕಲಿಕೆಯ ಪ್ರಕ್ರಿಯೆಯಲ್ಲಿ ಅವನು ಚೆನ್ನಾಗಿ ತೊಡಗಿಸಿಕೊಂಡನು. ಕೃಷ್ಣನು ಶಾಲೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಇದ್ದಾನೆ. ಸಮಾಜ ವಿಜ್ಞಾನ, ಗಣಿತ ಮತ್ತು ವಿಜ್ಞಾನ ಇವುಗಳ ಜೊತೆಗೆ ಭಾಷೆಗಳನ್ನು ಕಲಿಯುವ ಕಡೆಗೂ (ಹಿಂದಿ ಮತ್ತು ಇಂಗ್ಲಿಷ್) ಉತ್ತಮ ಪ್ರಗತಿಯನ್ನು ತೋರಿಸಿದ್ದಾನೆ.

ಒಂಬತ್ತು ವರ್ಷದ ಪೂಜಾಳಿಗೆ ಶ್ರವಣದೋಷದ ಸಮಸ್ಯೆಯಿದೆ ಅವಳಿಗೆ ಕಾಕ್ಲಿಯರ್ ಸಾಧನವನ್ನು ಜೋಡಿಸಿದ್ದರೂ ಸಹ ಮಾತನಾಡಲು ಮತ್ತು ಕೇಳಿಸಿಕೊಳ್ಳಲು ಅವಳು ಯಾವಾಗಲೂ ಕಷ್ಟಪಡುತ್ತಿದ್ದಳು. ಮೊದಲಿಗೆ ಶಾಲೆಗೆ ಬಂದಾಗ ಅವಳು ಮೌನವಾಗಿಯೇ ಇರುತ್ತಿದ್ದಳು. ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ಇತರ ಮಕ್ಕಳು ಹಾಡುಗಳನ್ನು ಹಾಗೂ ಶಿಶುಗೀತೆಗಳನ್ನು ಹಾಡುತ್ತಿರುವಾಗ ಅವಳು ಅವರನ್ನು ನೋಡುತ್ತಾ ಸುಮ್ಮನೆ ಇದ್ದುಬಿಡುತ್ತಿದ್ದಳು ಅಥವಾ ಒಂದೆರಡು ಪದಗಳನ್ನು ಗೊಣಗುತ್ತಿದ್ದಳು. ಅವಳಿಗೆ ಬೆಳಗಿನ ಸಭೆಗಳಷ್ಟೇ ಹೆಚ್ಚು ಇಷ್ಟವಾಗುತ್ತಿದ್ದುದು. ಇತರ ತರಗತಿಗಳು ಅವಳಿಗೆ ಇಷ್ಟವಾಗುತ್ತಿರಲಿಲ್ಲ. ಕಲೆ ಮತ್ತು ಕರಕುಶಲ ತರಗತಿಯ ನಿರೀಕ್ಷೆಯಲ್ಲಿಯೇ ಅವಳು ಇರುತ್ತಿದ್ದಳು. ಮುಂಚೆ ಅವಳು ಒಂದು ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ ಓದುತ್ತಿದ್ದಳು. ಅವಳು ಹಿಂದಿನ ಶಾಲೆಯಿಂದ ಹೊತ್ತು ತಂದ ತರಗತಿಯ ಪ್ರಕ್ರಿಯೆ, ಶಿಕ್ಷಕರ ವರ್ತನೆ, ಹಾಗೂ ತೋರಿಕೆಯ ಶಿಸ್ತಿನ ಒತ್ತಡದ ಸಂಗತಿಗಳ ಬಗ್ಗೆ ಭಯಭೀತಳಾಗಿ ತನ್ನಷ್ಟಕ್ಕೆ ತಾನು ಇರುತ್ತಿದ್ದುದು ನಮ್ಮ ಶಾಲೆಯಲ್ಲಿಯೂ ಪ್ರತಿಬಿಂಬಿತವಾದವು.

ನಾವು ಅವಳಿಗೆ ತರಗತಿಗೆ ಹೋಗುವಂತೆ ಒತ್ತಡ ಹೇರಲಿಲ್ಲ. ಬಹಳಷ್ಟು ಬಾರಿ ಅವಳು ಚಿಕ್ಕ ಮಕ್ಕಳ ತರಗತಿಗೆ ಹೋಗಿ ಮಕ್ಕಳಿಗೆ ಕಥೆಗಳನ್ನು ಜೋರಾಗಿ ಓದಿ ಹೇಳುತ್ತಿದ್ದಳು. ಒಂದೆರಡು ತಿಂಗಳ ನಂತರ ಅವಳು ಗಣಿತದ ತರಗತಿಯಲ್ಲಿ ಭಾಗವಹಿಸಲು ಆರಂಭಿಸಿದಳು. ಅಲ್ಲಿ ಭಿನ್ನರಾಶಿಗಳನ್ನು ಹೇಳಿಕೊಡುತ್ತಿದ್ದರು. ಪೂಜಾ ಕಲೆ ಮತ್ತು ಕರಕುಶಲ ವಿಷಯಗಳ ಬಗ್ಗೆ ಬಹಳ ಆಸಕ್ತಿ ಹೊಂದಿದ್ದಳು ಎಂದು ಶಿಕ್ಷಕರಿಗೆ ಗೊತ್ತಿತ್ತು. ಹಾಗಾಗಿ ಅವಳಿಗೆ ವೃತ್ತಾಕಾರದ ರಟ್ಟಿನ ತುಂಡನ್ನು ನೀಡಿ ಅವಳಿಗೆ ಅದನ್ನು 1/2, 1/3 ಮತ್ತು 1/4 ತುಂಡುಗಳನ್ನಾಗಿ ಕತ್ತರಿಸಲು ಹೇಳಿದರು. ತಕ್ಷಣವೇ ಅದನ್ನು ತೆಗೆದುಕೊಂಡು ಪೆನ್ಸಿಲ್ ಮತ್ತು ಅಂಚುಪಟ್ಟಿಯೊಡನೆ ಚಿತ್ರಗಳ ಭಾಗಗಳನ್ನು ಗುರುತಿಸಿದಳು. ಆ ಆಕಾರಗಳು ಬೇರೆಬೇರೆಯಾಗಿ ಗುರುತಿಸುವಂತೆ ಮಾಡಲು ಬೇರೆಬೇರೆ ಬಣ್ಣಗಳನ್ನು ತುಂಬಲು ಶಿಕ್ಷಕರು ತಿಳಿಸಿದರು. ಅವಳಿಗೆ ಇಷ್ಟದ ಕೆಲಸವಾದ್ದರಿಂದ ಹೆಚ್ಚಿನ ಸಮಯ ತೆಗೆದುಕೊಳ್ಳದೆ ಇದನ್ನು ಮಾಡಿ ಮುಗಿಸಿದಳು. ಈ ಕೆಲಸವನ್ನು ಮಾಡಿದ್ದು ಅವಳು ತರಗತಿಯಲ್ಲಿ ಹೆಚ್ಚಿನ ಗಮನ ನೀಡುವಂತೆ ಸಹಾಯ ಮಾಡಿತು ಮತ್ತು ಭಿನ್ನರಾಶಿಯ ಮೂಲ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ನಂತರ ಶಿಕ್ಷಕರು ಅವಳಿಗೆ ಇಂತಹ ಹಲವು ಚಟುವಟಿಕೆಗಳನ್ನು ನೀಡಿದರು. ಕೆಲವು ಅವಳು ಒಬ್ಬಳೇ ಮಾಡುವಂಥದ್ದು ಮತ್ತು ಉಳಿದವು ಗುಂಪಿನಲ್ಲಿ ಮಾಡುವಂಥದ್ದು. ಅವಳು ಸ್ನೇಹಿತರನ್ನು ಗಳಿಸಲು ಇವು ಸಹಾಯ ಮಾಡಿದವು. ಪೂಜಾಳು ಮನೆಯಲ್ಲಿಯೂ ಕೆಲಸಗಳನ್ನು ಮಾಡಿ ಶಾಲೆಗೆ ತರಲು ಆರಂಭಿಸಿದಳು.

ಅವಳಿಗೆ ಆಸಕ್ತಿ ಇದ್ದರೂ ಸಹ ಶ್ರವಣ ದೋಷದಿಂದಾಗಿ ಬೆಳಗಿನ ಸಭೆಗಳನ್ನು ಸಂಪೂರ್ಣವಾಗಿ ಆನಂದಿಸಲು ಸಾಧ್ಯವಾಗುತ್ತಿರಲಿಲ್ಲ. ಶಿಕ್ಷಕರು ತಮ್ಮೊಳಗೇ ಮಾತನಾಡಿಕೊಂಡು ಬೆಳಗಿನ ಸಭೆಯಲ್ಲಿ ಹಾಡುಗಳನ್ನು ಒಂದು ಸಿಡಿಯಲ್ಲಿ ಮುದ್ರಿಸಿ ಮನೆಯಲ್ಲಿ ಕೇಳಲು ಅವಳಿಗೆ ಕೊಟ್ಟರು. ಇದರಿಂದಾಗಿ ಅವಳು ಕೇವಲ ಬೆಳಗಿನ ಸಭೆಗಳನ್ನು ಆನಂದಿಸಲು ಸಾಧ್ಯವಾದದ್ದಷ್ಟೇ ಅಲ್ಲ, ಇತರ ತರಗತಿಗಳಲ್ಲೂ ಭಾಗವಹಿಸಲು ಆರಂಭಿಸಿದಳು. ಅವಳು ಹೆಚ್ಚು ಮಾತನಾಡಲು ಆರಂಭಿಸಿದಳು ಮತ್ತು ಬರೆಯುವ ಅಭ್ಯಾಸವೂ ಸಹ ಬೆಳೆಯಿತು. ಪ್ರಯೋಗ ಮತ್ತು ಮಾದರಿಗಳನ್ನು ಮಾಡುತ್ತಾ ಗಂಟೆಗಟ್ಟಲೆ ವಿಜ್ಞಾನ ತರಗತಿಗಳಲ್ಲಿ ಕೂರುತ್ತಿದ್ದಳು. ಶಿಕ್ಷಕರೊಡನೆ ಮಾತನಾಡಿ ಸೆಲ್ಲುಗಳು, ಮೋಟಾರುಗಳು, ವೈರುಗಳು ಮತ್ತು ಅಯಸ್ಕಾಂತಗಳು ಮುಂತಾದವುಗಳನ್ನು ಮನೆಯಿಂದ ತರುತ್ತಿದ್ದಳು. ಈ ವಸ್ತುಗಳನ್ನು ಬಳಸಿ ವಿದ್ಯುತ್ ಸ್ವಿಚ್‌ಗಳನ್ನು ಮಾಡಿ ಅಯಸ್ಕಾಂತದಲ್ಲಿ ಹಲವು ಪ್ರಯೋಗಗಳನ್ನು ಮಾಡಲು ಆರಂಭಿಸಿದಳು.

ಅವಳು ತನ್ನ ಸ್ನೇಹಿತರೊಂದಿಗೆ ಮತ್ತು ಶಿಕ್ಷಕರೊಂದಿಗೆ ಚೆನ್ನಾಗಿ ಹೊಂದಿಕೊಳ್ಳಲು ಪ್ರಾರಂಭಿಸಿದಳು. ಶಾಲೆಯಲ್ಲಿ ಅವಳ ಶ್ರವಣ ದೋಷವು ಯಾವುದೇ ರೀತಿಯ ಅಡೆತಡೆಗಳನ್ನು ಒಡ್ಡಲಿಲ್ಲ. ಈ ದೌರ್ಬಲ್ಯದ ಬಗ್ಗೆ ಯಾರೂ ಮಾತನಾಡುತ್ತಿರಲಿಲ್ಲ ಮತ್ತು ಯಾರೂ ಇದನ್ನು ಅಡಚಣೆಯೆಂದು ಪರಿಗಣಿಸುತ್ತಿರಲಿಲ್ಲ. ಸಂಗೀತ ತರಗತಿಯಲ್ಲಿ ಅವಳು ಆಸಕ್ತಿಯಿಂದ ಭಾಗವಹಿಸುತ್ತಿದ್ದಳು ಮತ್ತು ಎಲ್ಲಾ ಹಾಡುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದಳು. ಶಾಲೆಯ ವಾರ್ಷಿಕೋತ್ಸವದಲ್ಲಿ ಮಾಡಿದ ಒಂದು ನಾಟಕದಲ್ಲಿ ಅವಳು ಭಾಗವಹಿಸಿದ್ದಲ್ಲದೆ ಮತ್ತು ವೃಂದಗಾನದಲ್ಲಿ ಭಾಗವಹಿಸಿ ಎಲ್ಲಿಯೂ ತಪ್ಪದಂತೆ ಹಾಡುತ್ತಿದ್ದಳು.

ಹತ್ತು ವರ್ಷದ ಸ್ವಾತಿಯು ನೋಯಿಡಾದಿಂದ ಭೋಪಾಲಿಗೆ ಬಂದಿದ್ದಳು. ಅವಳಿಗೆ ಮಾತನಾಡುವುದರಲ್ಲಿ ತೊಂದರೆಯಿತ್ತು. ಅವಳು ಮಾತನಾಡುವಾಗ ಬಹಳ ಉಗ್ಗುತ್ತಿದ್ದುದರಿಂದ

ಹಿಂಜರಿಯುತ್ತಿದ್ದಳು. ಶಾಲೆಯ ಸ್ನೇಹಪೂರ್ಣ ಮತ್ತು ನಿರ್ಬಂಧವಿಲ್ಲದ ವಾತಾವರಣವು ಎಲ್ಲರಿಗೂ ಅವಕಾಶಗಳಿರುವುದನ್ನು ಖಾತರಿಪಡಿಸುತ್ತದೆ. ಸ್ವಾತಿಗೆ ಇದು ಪರಿಚಿತವಲ್ಲದಿದ್ದರೂ ಎಲ್ಲರೊಡನೆಯೂ ಬೆರೆಯಲು ಈ ವಾತಾವರಣವು ಸುಲಭ ಮಾಡಿತು. ಶಾಲೆಯಲ್ಲಿ ಯಾರೂ ಅವಳ ಉಗ್ಗುವಿಕೆಯ ಬಗ್ಗೆ ಲಕ್ಷ್ಯ ನೀಡದೇ ಅವಳೊಡನೆ ಮಾತನಾಡುತ್ತಿದ್ದರು. ಉದ್ದೇಶಪೂರ್ವಕವಾಗಿಯೇ ಶಿಕ್ಷಕರು ಅವಳಿಗೆ ಪ್ರಶ್ನೆಗಳನ್ನು ಕೇಳಿ ಅವಳು ಮಾತನಾಡುವ ಅವಕಾಶಗಳನ್ನು ಕಲ್ಪಿಸುತ್ತಿದ್ದರು. ಹಾಗಾಗಿ ಅವಳು ಧೈರ್ಯ ಪಡೆದುಕೊಂಡಳು. ಮುಕ್ತವಾಗಿ ಮಾತನಾಡಲು ಸ್ವಾತಿಯು ಆರಂಭಿಸಿದಳು. ಬೆಳಗಿನ ಸಭೆಯಲ್ಲಿ ಅವಳು ಪದ್ಯಗಳನ್ನು ಹೇಳುತ್ತಿದ್ದಳು ಮತ್ತು ಹಾಡುಗಳನ್ನು ಹಾಡುತ್ತಿದ್ದಳು. ಅವಳ ಮಾತುಗಳೂ ಉತ್ತಮಗೊಂಡವು. ಎಂದೂ ಮಾತನಾಡಲು ಅವಳಿಗೆ ಅವಕಾಶ ಕೊಡದೇ ಇದ್ದದ್ದು ಮತ್ತು ಮಾತನಾಡುವುದನ್ನು ತಡೆದದ್ದೇ ಅವಳಿಗಿದ್ದ ತೊಂದರೆಯೇನೋ ಅನ್ನಿಸಿತು.

ಅವಳು ನೋಯಿಡಾದಲ್ಲಿ ಓದುತ್ತಿದ್ದ ಶಾಲೆಯಲ್ಲಿ ವಾರ್ಷಿಕೋತ್ಸವಕ್ಕೆ ಹಿಂದಿನ ಎರಡು ವಾರಗಳ ಮೊದಲು ಶಾಲೆಗೆ ಬರಬಾರದು ಎಂದು ತಾಕೀತು ಮಾಡಿದ್ದರು ಎಂದು ಅವಳ ತಾಯಿ ನಮಗೆ ತಿಳಿಸಿದರು. ಯಾವುದೇ ಚಟುವಟಿಕೆಯಲ್ಲೂ ಭಾಗವಹಿಸಲು ಅವಳಿಗೆ ಅವಕಾಶವನ್ನು ನೀಡಿರಲಿಲ್ಲ. ಇವು ಸ್ವಾತಿಯ ಆತ್ಮಸ್ಥೈರ್ಯವನ್ನು ಕುಗ್ಗಿಸಿತು. ಒಂದು ವಿಧದ ಕೀಳರಿಮೆ ಅವಳಲ್ಲಿ ಬೇರೂರಲಾರಂಭಿಸಿ ಅವಳು ಮಾತನಾಡುವ ತೊಂದರೆಯನ್ನು ಹೆಚ್ಚು ಮಾಡಿತು.

ಆನಂದ್‌ನಿಕೇತನ್ ಶಾಲೆಯಲ್ಲಿ ಪ್ರತಿದಿನ ಭಾಷಾ ತರಗತಿಯು ಅಂದಿನ ಪಾಠವನ್ನು ಪಾತ್ರಗಳ ಮೂಲಕ ಅಭಿನಯಿಸಿ ತೋರಿಸುವುದರೊಂದಿಗೆ ಕೊನೆಗೊಳ್ಳುತ್ತದೆ. ಈ ಕ್ರಿಯೆಯಲ್ಲಿ ಸ್ವಾತಿ ಭಾಗವಹಿಸಲಾರಂಭಿಸಿದಳು. ಶಾಲೆಗೆ ನಿಯಮಿತವಾಗಿ ಬರಲಾರಂಭಿಸಿದಳು. ಶಾಲೆಯ ವಾರ್ಷಿಕೋತ್ಸವದಲ್ಲಿ ಅವಳು ಭೂಪೇನ್ ಹಜಾರಿಕ ಅವರ 'ವಿಸ್ತಾರ್ ಹೈ ಅಪಾರ್.. ಪ್ರಜಾ ದೋನೋ ಪಾರ್' ಎಂಬ ಹಾಡನ್ನು ಹಾಡಿದಳು. ಸಭಿಕರು ಮಂತ್ರಮುಗ್ಧರಾದರು. ಅವಳು ಸ್ವಲ್ಪ ಕೂಡ ಉಗ್ಗಲೇ ಇಲ್ಲ!!

ಈ ಮಕ್ಕಳು ಕೊನೆಯಿಲ್ಲದಷ್ಟು ಸಾಧ್ಯತೆಗಳಿಂದ ತುಂಬಿಕೊಂಡಿದ್ದಾರೆ. ಪ್ರತೀ ಮಗುವೂ ತನ್ನದೇ ಆದ ಪ್ರತಿಭೆ ಹಾಗೂ ಸಾಮರ್ಥ್ಯಗಳನ್ನು ಹೊಂದಿದೆ. ಕಲಿಕೆಯಲ್ಲಿ ಅವರು ಕೆಲವು ಬಾರಿ ತಮ್ಮ ಸಾಮಾಜಿಕ – ಆರ್ಥಿಕ ಕಾರಣಗಳಿಂದ ಮತ್ತು ಕೆಲವೊಮ್ಮೆ ದೈಹಿಕ ಮತ್ತು ಮಾನಸಿಕ ಅಡೆತಡೆಗಳಿಂದಾಗಿ ಎಡವುತ್ತಾರೆ. ಈ ಮಕ್ಕಳ ಅಂತಃಸತ್ವಗಳನ್ನು ಗಮನಿಸಿ, ತಮ್ಮ ಅಗತ್ಯ ಹಾಗೂ ಮಿತಿಗಳನ್ನು ಅರಿತು, ಅವರಿಗೆ ಅವರ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶ ನೀಡುವುದು ಹಾಗೂ ಆ ಸಾಮರ್ಥ್ಯಗಳನ್ನು ಪೋಷಿಸಲು ಅವಕಾಶಗಳನ್ನು ಒದಗಿಸುವುದು ಶಾಲೆಯ ಜವಾಬ್ದಾರಿಯಾಗಿದೆ. ಇದರಿಂದ ಇತರರೆಲ್ಲರ ಜೊತೆಗೆ ಅವರು ಸಾಗಲು, ತಮ್ಮ ಸಾಮರ್ಥ್ಯಗಳಲ್ಲಿ ನಂಬಿಕೆಯಿರಿಸಿಕೊಂಡು ಏನೆಲ್ಲ ಕಲಿಯಬೇಕೋ ಆ ಎಲ್ಲವನ್ನು ಕಲಿಯಲು ಸಾಧ್ಯವಾಗುತ್ತದೆ. ಶಾಲೆಯ ಸಂಪ್ರದಾಯ ಮತ್ತು ರೂಢಿಗತ ಆಚರಣೆಗಳ ಭಾಗವಾಗಿ ಅನುಕಂಪ, ನಮ್ರತೆ, ಸಹನೆ, ಸಮಾನತೆ ಹಾಗೂ ಮಾನವೀಯ ದೃಷ್ಟಿಕೋನವನ್ನು ಸಂಯೋಜಿಸಬೇಕಾದುದು ಅತ್ಯವಶ್ಯಕ. ಹಾಗಾದಾಗ, ಎಲ್ಲ ಮಕ್ಕಳೂ ಎಲ್ಲವನ್ನು ಕಲಿಯುವಂತಾಗುತ್ತದೆ.

*ಮಕ್ಕಳ ಗೌಪ್ಯತೆಯನ್ನು ಕಾಪಾಡಲು ಹೆಸರುಗಳನ್ನು ಬದಲಾಯಿಸಲಾಗಿದೆ.



ಅನಿಲ್ ಸಿಂಗ್ ಅವರು ಶಿಕ್ಷಣ ಕ್ಷೇತ್ರದಲ್ಲಿ, ವಿಶೇಷವಾಗಿ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ 15 ವರ್ಷಗಳಿಂದಲೂ ಕ್ರಿಯಾಶೀಲರಾಗಿದ್ದಾರೆ. ಹಿಂದಿ ಭಾಷೆಯನ್ನು ಕಲಿಸುವುದರ ಜೊತೆಗೆ ವಿದ್ಯಾರ್ಥಿಗಳ ದಿನನಿತ್ಯದ ಚಟುವಟಿಕೆಗಳೊಟ್ಟಿಗೆ ರಂಗಕಲೆಯನ್ನು ಬೆರೆಸುತ್ತಾರೆ. ಅವರು ಕಥೆ ಹೇಳುವುದರಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ತಮ್ಮ ತರಗತಿಯಲ್ಲಿನ ಅನುಭವಗಳು ಮತ್ತು ಶಿಕ್ಷಣದಲ್ಲಿನ ಇತರ ವಿದ್ಯಮಾನಗಳ ಬಗ್ಗೆ ಅವರು ನಿಯತವಾಗಿ ಲೇಖನಗಳನ್ನು ಬರೆದು ಪ್ರಕಟಿಸುತ್ತಾರೆ. ಭೋಪಾಲ್‌ನ ಆನಂದ್ ನಿಕೇತನ್ ಡೆಮಾಕ್ರೆಟಿಕ್ ಶಾಲೆಯಲ್ಲಿ ಅನಿಲ್ ಅವರು ಪ್ರಸ್ತುತ ಶಿಕ್ಷಣದ ಪರ್ಯಾಯ ಮಾದರಿಯ ಶಿಕ್ಷಣದಲ್ಲಿ ತೊಡಗಿದ್ದಾರೆ. ಅವರನ್ನು bihuanandanil@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಸಿ ಎಸ್** । ಪರಿಶೀಲನೆ: **ಲತಾ ಕೆ ಸಿ**

ಶಿಕ್ಷಣವನ್ನು ಸಾಕ್ಷರತೆ ಹಾಗೂ ಪುಸ್ತಕೀಯ ಜ್ಞಾನವನ್ನು ನೀಡುವ ಪಾತ್ರ ಎನ್ನುವುದನ್ನು ಮೀರಿ ಒಬ್ಬ ವ್ಯಕ್ತಿಯನ್ನು ಅತ್ಯುತ್ತಮವಾಗಿ ರೂಪಿಸುವ ಪಾತ್ರವಾಗಿ ನೋಡುವುದು ಅನಿವಾರ್ಯ. ಈ ರೀತಿಯ ತಿಳುವಳಿಕೆಯು ಜನರೊಂದಿಗೆ ವ್ಯವಹರಿಸುವ ಮೂಲಕ ಮಾತ್ರ ಬೆಳೆಯುತ್ತದೆ

–ಜಗಮೋಹನ್ ಸಿಂಗ್ ಕಥೈಟ್, ಒಂದೇ ಸೂತ್ರದ ಹೆಣಿಕೆ– ಮಕ್ಕಳು, ಸಮುದಾಯ ಹಾಗು ಶಿಕ್ಷಕರು, ಪು.56